Date :25.11.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ B.N.T. ವಕೀಲರಿಂದ –**

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–18 ಎಂದು, ಈ ಕೇಸಿನ ಅರ್ಜಿದಾರರಾದ ನನ್ನ ತಾಯಿ ಹೆಸರಿಗೆ 1 ನೇ ಎದುರುದಾರರು ದಿಃ 26.11.2020 ರಂದು ಅವಾರ್ಡ ನೋಟೀಸ್ ಕಳುಹಿಸಿದ್ದು, ಅದರ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–19 ಎಂದು, ದಿಃ 04.01.2020 ರ ಕರ್ನಾಟಕ ರಾಜ್ಯ ಪತ್ರದಲ್ಲಿ ಕಲಂ 11(1) ರ ಅಧಿಸೂಚನೆ ಪ್ರಕಟವಾಗಿದ್ದು, ಅದರ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–20 ಎಂದು, ದಿಃ 11.09.2020 ರಂದು 1 ನೇ ಎದುರುದಾರರು ಸಾಮಾನ್ಯ ಐತೀರ್ಪು ಹೊರಡಿಸಿದ್ದು, ಅದರ ದೃಢೀಕೃತ ಪ್ರತಿ ಮತ್ತು ಒಂದು ಅವಾರ್ಡ ತಃಖ್ತೆಯ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–21 ಮತ್ತು 22 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರ 1 ಮತ್ತು 2 ರವರ ಪರ ಶ್ರೀಜೆ.ಎಸ್.ಎ. ಮತ್ತು ಡಿ.ಜಿ.ಪಿ. ವಕೀಲರಿಂದ –**

**(ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ನ್ಯಾಯಯುತ ದೃಷ್ಟಿಯಿಂದ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು).**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.